# ಮುಗಿದ ಅಧ್ಯಾಯ



■ ಸಿ.ಎನ್. ಮುಕ್ತಾ

ಫೋನ್ ರಿಂಗಾದಾಗ ಅಡುಗೆ ಮನೆಯಲ್ಲಿದ್ದ ಶಾರದಾ ಕೂಗಿದಳು.

‘ರಾಜೇಶ ಫೋನ್ ತೊಗೊಳೋ...’

‘ಅಮ್ಮ ನಿನಗೆ ಫೋನ್ ಬಂದಿರೋದು. ಮತ್ತೆ ಮಾಡ್ತಾರೆ ಬಿಡು’.

ಶಾರದಾ ಕೈ ಒರೆಸಿಕೊಳ್ಳುತ್ತಾ ಹೊರಗೆ ಬಂದಳು. ಫೋನ್ ಮತ್ತೆ ರಿಂಗಾಯಿತು. ‘ಶಾರಕ್ಕನಾ?’

‘ಹೌದು. ನೀವ್ಯಾರು?’

‘ನಾನು ಶುಭ, ಸರಸ್ವತಿ ಟೀಚರ್ ಅಣ್ಣನ ಮಗಳು’

‘ಏನು ಸಮಾಚಾರ? ಎಲ್ಲಾ ಚೆನ್ನಾಗಿದ್ದೀರಾ?’

‘ಸರಸತ್ತೆ ಬೆಳಿಗ್ಗೆ 7.30ಕ್ಕೆ ಹೋಗಿಬಿಟ್ಟರು...’

‘ಹೌದಾ? ಏನಾಗಿತ್ತು?’

‘ವರ್ಷದಿಂದ ಹುಷಾರಿರಲಿಲ್ಲ. ಕಿಡ್ನಿ ಫೇಲ್ಯೂರ್ ಆಗಿತ್ತು...’

‘ಸರಿಯಮ್ಮ. ನಾವು ಈಗಲೇ ಹೊರಡ್ತೀವಿ’ ಎಂದ ಶಾರದಾ ಮಗನನ್ನು ಕೂಗಿದಳು. ‘ಶಿವು, ರಾಜೇಶ ಮೈಸೂರಿಗೆ ಹೋಗಬೇಕು. ನಿಮ್ಮಿಬ್ಬರಲ್ಲಿ ಒಬ್ಬರು ರಜಾ ಹಾಕಿ’.

‘ಯಾಕಮ್ಮ, ಏನು ವಿಷಯ?’

‘ಸರಸ್ವತಿ ಮೇಡಂ ಹೋಗಿಬಿಟ್ರಂತೆ. ನಿಮ್ಮಪ್ಪಂಗೂ ವಿಷಯ ತಿಳಿಸು...’

‘ಅವರು ಸತ್ತರೆ ನಾವ್ಯಾಕೆ ಹೋಗಬೇಕಮ್ಮ?’ ಶಿವು ಕೇಳಿದ.

‘ನೀವೆಲ್ಲಾ ನಾಲ್ಕಕ್ಷರ ಕಲಿತಿದ್ರೆ ಅದಕ್ಕೆ ಅವರೇ ಕಾರಣ ಅನ್ನುವುದು ಮರೆಯಬೇಡಿ. ಹನ್ನೊಂದು ಗಂಟೆಗೆ ಹೊರಡೋಣ’.

ಶಿವು ತನ್ನ ತಂದೆ ಗಂಗಾಧರಪ್ಪನಿಗೆ ಫೋನ್ ಮಾಡಿದ. ಗಂಗಾಧರಪ್ಪ ಮನೆಗೆ ಬಂದವರು ವರಾಂಡದಲ್ಲಿ ಕುಳಿತು ‘ಶಾರಿ’ ಎಂದು ಕೂಗಿದರು. ಶಾರದಾಳ ಜೊತೆ, ಶಾರದೆಯ ಅತ್ತೆ ಜಯಮ್ಮನೂ ಹೊರಗೆ ಬಂದರು.

‘ಶಾರಿ, ನೀನು ಬೇಕಾದರೆ ಹೋಗಿ ಬಾ. ನಾನು ಬರಲ್ಲ’.

‘ಯಾಕೆ ಬರಲ್ಲ?’

ಗಂಗಾಧರಪ್ಪ ಉತ್ತರ ಕೊಡುವ ಮೊದಲೇ ಜಯಮ್ಮ ಹೇಳಿದರು. ‘ನಾನು ಅದೇ ಹೇಳ್ತಿರೋದು. ನೀನು ಯಾಕೆ ಹೋಗಬೇಕು? ಅವಳಾಡಿದ ಆಟ ನೋಡೇ ಕಣ್ಣು ತುಂಬೋಗಿದೆ. ಸದ್ಯ ಮನೆಯಿಂದ ತೊಲಗಿದಳಲ್ಲ. ಅದಕ್ಕೆ ಸಂತೋಷಪಡು. ಅವಳೇನು ನಮಗೆ ನೆಂಟಳಾ, ಸಂಬಂಧಾನಾ?’

‘ಸರಸ್ವತಿ ಯಾರೂಂತ ಗೊತ್ತಿಲ್ಲದೆ ಅವಳು ಕೊಟ್ಟಿರುವ ಒಂದು ಜೊತೆ ಬಳೆ, ಎರಡು ಎಳೆ ಸರ ಇಟ್ಕೊಂಡಿದ್ದೀರಾ? ತೆಗೆದು ಬಿಸಾಕಿ. ಏನ್ರಿ ನೀವು ಸರಸ್ವತಿ ಸಹಾಯ ಇಲ್ಲದೆ ಈ ಮನೆ ಕಟ್ಟಿದ್ರಾ? ಅಂಗಡಿಗೆ ಅವರು ಬಂಡವಾಳ ಕೊಡದೆ ಅಂಗಡಿ ಇಟ್ರಾ? ಈಗಾಗಲೇ ನಮ್ಮಿಂದ ಬೇಕಾದಷ್ಟು ತಪ್ಪುಗಳಾಗಿವೆ. ನಾವು ಈಗ ಹೋಗಲೇಬೇಕು, ಹೋಗ್ತೀವಿ ಅಷ್ಟೆ’.

‘ನಾನು ಬರಲ್ಲ. ನೀನು ಬೇಕಾದರೆ ಹೋಗು.’.

‘ಆಗಲಿ ಹೋಗ್ತೀನಿ. ಆದರೆ ನಾನು ವಾಪಸ್ಸು ಬರಲ್ಲ. ನಮ್ಮಣ್ಣನ ಮನೆಗೆ ಹೋಗ್ತೀನಿ’.

ಗಂಗಾಧರ ಮಾತಾಡಲಿಲ್ಲ. ಶಾರದಾ ಅಡುಗೆ ಮುಗಿಸಿ ಹೊಸದೊಂದು ಸೀರೆ, ಅರಿಶಿನ–ಕುಂಕುಮ, ಬಳೆ, ಹೂವು ತೆಗೆದು ಇಟ್ಟುಕೊಂಡಳು. ಹನ್ನೊಂದು ಗಂಟೆಗೆ ಸರಿಯಾಗಿ ಅವರು ಹೊರಟರು. ಗಂಗಾಧರ ಡ್ರೈವ್ ಮಾಡುತ್ತಿದ್ದ. ಶಿವು ಪಕ್ಕ ಕುಳಿತ. ಶಾರದಾ ರಾಜೇಶನ ಜೊತೆ ಹಿಂದೆ ಕುಳಿತಳು. ಕಾರು ಮುಂದೆ ಸಾಗುತ್ತಿದ್ದಂತೆ ನೆನಪಿನ ಚಕ್ರ ಹಿಂದಕ್ಕೆ ಓಡಿತು.

ಶಾರದಾ ಅಪ್ಪ–ಅಮ್ಮ ಗೊತ್ತು ಮಾಡಿದ್ದ ಗಂಗಾಧರನನ್ನು ಮದುವೆಯಾಗಿ ಕೊಳ್ಳೇಗಾಲಕ್ಕೆ ಬಂದಿದ್ದಳು. ಗಂಗಾಧರ ಹತ್ತಿರವೇ ಇದ್ದ ತಾವರೆಕಟ್ಟೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ಗುಮಾಸ್ತನಾಗಿದ್ದ. ಅವನು ಅಂತಹ ಅನುಕೂಲಸ್ಥನೇನಲ್ಲ. ಅವನ ತಾಯಿ–ತಂದೆ ಮೈಸೂರಿನ ಹತ್ತಿರದ ಹಳ್ಳಿಯಲ್ಲಿದ್ದರು. ಎರಡು